# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

### ಎಸ್.ಸಿ. ನಂ.36/2014

**ದೋ.ಸಾ. : 18 ಪ್ರಾ.ಸಾ. : 12**

ಸಾಕ್ಷಿಯ ಹೆಸರು : ವಿಜಯಲಕ್ಷ್ಮೀ ಪ್ರಭಾಕರ

ಗಂಡನ ಹೆಸರು : ಪ್ರಭಾಕರ

ವಯಸ್ಸು : 59 ವರ್ಷ

ಕೆಲಸ : ಚಹಾ ಅಂಗಡಿ ಕೆಲಸ

ವಾಸ : ರಾಜೀವನಗರ, ಕದ್ರಾ

**ದಿನಾಂಕಃ 03-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ವೇಲು ಇಲ್ಲನ್ ಗುಡಿ ಹಾಗೂ ಆತನ ಮಕ್ಕಳ ಕೊಲೆಯಾದ 3 ನೇ ದಿನಕ್ಕೆ ಕದ್ರಾ ಪೊಲೀಸರು ನನ್ನನ್ನು ಪಂಚನಾಮೆಗಾಗಿ ಠಾಣೆಗೆ ಕರೆಸಿದ್ದರು. ಆ ಸಮಯದಲ್ಲಿ ಠಾಣೆಯಲ್ಲಿ ಚಾಸಾ-19 ರವರ ಸಹ ಹಾಜರಿದ್ದರು. ಅಲ್ಲಿ ಪೊಲೀಸರು ಮೃತ ವೇಲು ಇಲ್ಲನ್ ಗುಡಿಯ ಹೆಂಡತಿಯಾದ ಚಾಸಾ-22 ರವರ ಬಟ್ಟೆಗಳನ್ನು ತಂದು ಹಾಜರಪಡಿಸಿದ್ದು, ಅವುಗಳಲ್ಲಿ ಒಂದು ಹಸಿರು ಬಣ್ಣದ ಸ್ವೆಟರ್, ಒಂದು ಗುಲಾಬಿ ಬಣ್ಣದ ಸೀರೆ, ಒಂದು ಲಂಗ ಮತ್ತು ಒಂದು ಬ್ಲೌಸ್ ಇರುತ್ತವೆ ಹಾಗೂ ಸದರಿ ಬಟ್ಟೆಗಳಿಗೆ ರಕ್ತ ತಾಗಿರುತ್ತದೆ. ಅವುಗಳನ್ನು ಪೊಲೀಸರು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು, ಜಪ್ತು ಪಂಚನಾಮೆಯನ್ನು ಮಾಡಿ, ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಜಪ್ತು ಪಂಚನಾಮೆಯನ್ನು ಬೆಳಿಗ್ಗೆ 11-00 ಯಿಂದ ಮಾಡಿರುತ್ತಾರೆ. ಸದರಿ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-45 ಎಂದು, ಸಾಕ್ಷಿಯ ಸಹಿಯನ್ನು ನಿಪಿ-45(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ನಾಲ್ಕು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅವುಗಳನ್ನು ತೆರೆಯಲು ಅನುಮತಿಸಲಾಯಿತು.)**

ಸಾಕ್ಷಿಯ ಚಾಸಾ–22 ರವರ ಸ್ವೆಟರ್, ಸೀರೆ, ಲಂಗ ಮತ್ತು ಬ್ಲೌಸ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು–30 ರಿಂದ ಮುದ್ದೆ ಮಾಲು–33 ಎಂದು ಗುರುತಿಸಲಾಯಿತು. ಮುದ್ದೆ ಮಾಲು–30 ರ ಮೇಲೆ ಅಂಟಿಸಿರುವ ಚೀಟಿ ಹಾಳಾಗಿದ್ದು, ಸಹಿ ಕಾಣುತ್ತಿಲ್ಲ, ಮುದ್ದೆ ಮಾಲು–31 ರಿಂದ 33 ರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು–31(ಎ) ರಿಂದ 33(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

3. ಪೊಲೀಸರು ಪಂಚನಾಮೆಗೆ ಬರುವಂತೆ ಯಾವುದೇ ನೋಟಿಸ್ ನೀಡಿಲ್ಲ, ಆದರೆ ಪೊಲೀಸರು ನನ್ನನು ಮೌಖಿಕವಾಗಿ ಕರೆದಿರುತ್ತಾರೆ. ನಾವು ಪೊಲೀಸ್ ಠಾಣೆಗೆ ಸುಮಾರು 10 ಜನ ಹೋಗಿರುತ್ತೇವೆ. ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಿಪಿ–45 ಜಪ್ತು ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಪೊಲೀಸರು ಸಹಿ ಮಾಡು ಎಂದು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಮುದ್ದೆ ಮಾಲು–30 ರಿಂದ 33 ರನು ಇದೇ ಮೊದಲ ಬಾರಿಗೆ ನೋಡುತ್ತಿದ್ದೆನೆ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿ. ಪಂಚನಾಮೆ ಹಾಗೂ ಮುದ್ದೆ ಮಾಲುಗಳನ್ನು ಪೊಲೀಸರು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ